ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಮಾರ್ಚ 1895ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ನಮೂದಿರುವ ಸಬ್ ರಿಜಿಸ್ಟ್ರಾರಗಳ ಆಫಿಸಗಳಲ್ಲಿ ಬೇವಾರಸುಗಿರುವ ದಸ್ತಾವೇಜುಗಳನ್ನು ಹಾಜರು ಮಾಡಿದವರುಗಲಿ ಅಥವಾ ಅವರಿಂದ ಕ್ರಮವಾದ ಅಧಿಕಾರ ಪಡದುಕೊಂಡ ಮುಖ್ತಾರೀಕರುಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಆಯಾ ಸಬ್ ರಿಜಿಸ್ಟ್ರಾರ ಮುಂದೆ ಹಾಜರಾಗಿ ವಾಪಸು ತೆಗದುಕೊಂಡು ಹೋಗಬಹುದು. ಇಲ್ಲವಾದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅವುಗಳನ್ನು ನಾಶಪಡಿಸಲಾಗೀತು.

ಆಫಿಸ ಹೆಸರು.	ದಸ್ತಾವೇಜಿನ ನಂಬರ್.	ದಸ್ತಾವೇಜ ಬರದುಕೊಟ್ಟವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜ ಬರಸಿಕೊಂಡವರ ಹೆಸರು ಮತ್ತು ಅಡ್ಡ ಹೆಸರು ವಾಸಸ್ಥಾನ ವಗೈರೆ.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಂಮತು.
ಚಿಂತಾಮಣಿ	23 / 1892—93	ಚಿಕ್ಕಬಳ್ಳಾಪುರದಲ್ಲಿರುವ ಸ್ಮಾರ್ತ ಬ್ರಾಹ್ಮಣ ದೇಶಕುಲಕರಣಿ ಸೂರಪ್ಪನವರ ಕೊಮಾರ ಚಿತಾರಾಮಪ್ಪ	ಚಿತ್ತೂರು ಜಿಲ್ಲಾ ಪುಂಗನೂರು ತಾಲ್ಲೂಕು ಚಂಬುಕೂರುನಲ್ಲಿರುವ ಬ್ರಾಹ್ಮಣ ಭಾಸ್ಕರಪ್ಪನವರ ಕೊಮಾರ ಲಕ್ಷ್ಮೀನಾರಣಪ್ಪ	1892ನೇ ಇಸವಿ ಫಿಬ್ರವರಿ ತಾರೀಖು 6ರಲ್ಲು	1892ನೇ ಇಸವಿ ಜೂನ ತಾರೀಖು 3ರಲ್ಲು ರಿಜಿಸ್ಟರ ಆಗಿಧೆ	999 ರೂಪಾಯಿ ಅಧಾರ ಜಮೀನ ಪತ್ರ
ಬಾಗೇಪಲ್ಲಿ	2 / 1892—93	ಜೇಳೂರು ಹೋಬಳಿ ಮಾತೂರು ,ವಾಸಸ್ಥಾದ 1 ಗೆರಗೆ ಅಪ್ಪೇನು ಮಗ ಗಂಗಪ್ಪ 2 ಗೆರಗೆ ವೆಂಕಟಪ್ಪನಹೆಂಡತಿ ರಾಮಕ್ಕ 3 ಗೆರಗೆ ಸುಬ್ಬರಡ್ಡಿ ಮಗ ಅಯ್ಯಪ್ಪ 4 ವೇಮಂಣ 5 ಮದ್ದಂಣ	ಜೇಳೂರು ಹೋಬಳಿ ಕೇರುಖರ್ಜ ಕೋಟೆ ವಾಸಸ್ಥನಾದ ವಕ್ಕಲಿಗ ದೊಡ್ಡ ಬಂಟ್ರೋತನ ಮಗ ತಿಮ್ಮಣ್ಣ	1892ನೇ ಇಸವಿ ಜುಲ್ಯೆ ತಾರೀಖು 7ರಲ್ಲು	ಈ ದಸ್ತೈವಜು ತಿರಸ್ಕರಿಸಿ ಇಧೆ 31ನೇ ಅಗಸ್ಟ 92ನೇ ಇಸವಿ	ಜೇಳೂರು ಹೋಬಳಿ ಕೇರಖರ್ಜ ಕೋಟೆ ದೊಡ್ಡಕೆರೇಲಿ ಕಲ್ಲುಕಟ್ಟಿದ ಕಪಿಲೆ ಬಾವಿಯನ್ನ 65 ರೂಪಾಯಿಗೆ ಖರೀದಿ ಮಾಡಿರುವದಾಗಿ
ಗುಡಿಬಂಡೆ	28 / 1892—93	ಗುಡಿಬಂಡೆ ಹೋಬಳಿ ಬತ್ತಲಹಳ್ಳೀಲಿರುವ ಅಂಜಿಪ್ಪೋತಲಯ್ಯನ ಮಗ ತಳವಾರ ನರಶಿಗ	ಚಿಕ್ಕತಮ್ಮನಹಳ್ಳಿಯಲ್ಲಿರುವ ವರದರಡ್ಡಿ ಮಗ ವಕ್ಕಲಿಗ ಗೊರ್ಲರಡ್ಡಿ	1892ನೇ ಇಸವಿ ಅಕ್ಟೋಬರ ತಾರೀಖು 13ರಲ್ಲು	1892ನೇ ಇಸವಿ ನವೆಂಬರು ತಾ॥ 11ರಲ್ಲು ರಿಜಿಸ್ಟರ ಆಗಿಧೆ	200 ರೂಪಾಯಿನ ಭೂಸ್ಥಿತಿ ಕ್ರಯದ ದಸ್ತೈವಜ

ಅಬ್ದುಲ್ಅಜೀಜ್,
ಫಾರ ರಿಜಿಸ್ಟ್ರಾರ.

ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ ಇಲಾಖಾ.

ನೋಟಿಫಿಕೇಷನ್.

ತಾರೀಖು 6ನೇ ಏಪ್ರೆಲ 1895.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟ ಸ್ಟೇಟ ಫಾರೆಸ್ಟ ಬಾಬತು ಈ ಕೆಳಗೆ ವಿವರಿಸುವ ಪಸಾರ ಜಿನಸಿಗಳು ಸನ್ 1895ನೇ ಇಸವಿ ಏಪ್ರೆಲ ತಾರೀಖು 30ರಲ್ಲು ಮೈಸೂರು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಂದ ಮೈಸೂರು ವೃಡಿಯಾರಡಲ್ಲಿ ಹರಾಜ ಮಾಡಿಸಲ್ಪಡುತ್ತೆ.

ಜಿನಸಿ ತಪ್ಸೀಲ.	ಸುವಾರು ಮೊತ್ತ.	
	ಮಣ.	ಪೌ.
ಅಳಲೆಕಾಯಿ	3,000	..
ಅರಗು	150	..